ದಿನಾಂಕಃ **01-02-2023**

ಸಾಕ್ಷಿದಾರರಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು

**<u>ಮುಂದುರಿದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ.ಡಿ. ವಕೀಲರಿಂದಃ</u>**

ನಾನು ಈಗಾಗಲೇ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ದಾಖಲೆಗಳು ಇವೆ ಅವೆಂದರೆ ನಾನು ಅಲ್ಲಲ್ಲಿ ಹಣವನ್ನುಸಾಲವಾಗಿ ಪಡೆದ ಬಗ್ಗೆ ದಾಖಲೆಗಳು ಇವೆ. ಆ ರೀತಿಯಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನೂ ತೊಂದರೆ ಇರಲಿಲ್ಲ. ನಾನು ಸಾಲ ಪಡೆದ ಬಗ್ಗೆ ದಾಖಲೆಗಳನ್ನು ಹೊರತುಪಡಿಸಿ ನನ್ನ ಬಳಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ಎದುರುದಾರರ ಜಮೀನಿನಿಂದ ವಾರ್ಷಿಕ ರೂ.3,00,000/- ಆದಾಯ

ಪಡೆಯುತ್ತಾರೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇಲ್ಲ ಎಂದರೆ ನಿಜ. ಜಮೀನಿನ ಪಹಣಿ ಪತ್ರಿಕೆಗಳು ಎದುರುದಾರರ ಹೆಸರಿನಿಂದ ಇರುವುದಿಲ್ಲ, ಆದರೆ ನನ್ನ ಅತ್ತೆಯ ಹೆಸರಿನಿಂದ ಇರುತ್ತದೆ. ನನ್ನ ಗಂಡನಿಗೆ 3 ಜನ ಸಹೋದರಿಯರು ಮತ್ತು ಇಬ್ಬರು ಸಹೋದರರು ಇರುತ್ತಾರೆ. ನನ್ನ ಮಾವನ ಹೆಸರು ಸಿದ್ದಯ್ಯ, ಅತ್ತೆಯ ಹೆಸರು ಮನಿಯಮ್ಮ ಇರುತ್ತದೆ. ನಾನು ಹಾಜರುಪಡಿಸಿರುವ ನಿ.ಪಿ.8 ದಾಖಲೆಯ ಪ್ರಕಾರ ಸದರಿ ಜಮೀನು ನನ್ನ ಅತ್ತೆಯವರಿಗೆ ಸರ್ಕಾರದಿಂದ ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.8 ದಾಖಲೆಯಲ್ಲಿ ನಮೂದಿರುವ ಸ್ವತ್ತಿನಲ್ಲಿ ನನ್ನ ಗಂಡನ ಸಹೋದರ, ಸಹೋದರಿಯರಿಗೂ ಹಕ್ಕು ಇರುತ್ತದೆ ಎಂದರೆ ನಿಜ. ಎದುರುದಾರರು ವ್ಯವಸಾಯದಿಂದ ವಾರ್ಷಿಕ ರೂ.3,00,000/- ಆದಾಯ ಪಡೆದುಕೊಳ್ಳುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ನಾನೇ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ನಿಜ. ಆದರೆ ನಾನು ಬಂದ ಆದಾಯದಲ್ಲಿ ಅವರಿಗೂ ಕೂಡ ಅರ್ಧ ಭಾಗವನ್ನು ಕೊಡುತ್ತಿದ್ದೇನೆ. ನಾನು ಹೇಳುವಂತೆ ಆದಾಯದಲ್ಲಿ ಎದುರುದಾರರಿಗೆ ಯಾವುದೇ ಭಾಗವನ್ನು ಕೊಟ್ಟಿಲ್ಲವಾದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿ.ಪಿ.7 ಬಾಡಿಗೆ ಕರಾರಿನಲ್ಲಿ ನಮೂದಿಸಿರುವ ರೂ.1,00,000/- ಅಡ್ವಾನ್ಸ್ ಹಣವನ್ನು ಎದುರುದಾರರೇ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯ ಬಾಡಿಗೆಯನ್ನು ನನ್ನ ಮಗ ಪ್ರತಿ ತಿಂಗಳು ಎದುರುದಾರರ ಬಳಿಗೆ ಹೋಗಿ ಅವರಿಂದ ಪಡೆದು ಪಾವತಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಗ ತಿ.ನರಸೀಪುರದ ಪಿ.ಆರ್.ಎಂ .ಕಾಲೇಜಿನಲ್ಲಿ ಐ.ಟಿ.ಐ. ವಿದ್ಯಾಭ್ಯಾಸ ಮಾಡಿದ್ದಾನೆ ಎಂದರೆ ನಿಜ. ನನ್ನ ಮಗ 1 ನೇ ತರಗತಿಯಿಂದ ಐಟಿಐ ಪೂರ್ಣಗೊಳ್ಳುವವರೆಗೂ ಕೂಡ ತಿ.ನರಸೀಪುರದಲ್ಲಿಯೇ ವಿದ್ಯಾಭ್ಯಾಸ ಮಾಡಿದ್ದಾನೆ ಎಂದರೆ ನಿಜ. ನನ್ನ ಮಗನ ಸಂಪೂರ್ಣ ವಿದ್ಯಾಭ್ಯಾಸದ ಖರ್ಚು-ವೆಚ್ಚಗಳನ್ನು ಎದುರುದಾರರೇ ಭರಿಸಿರುತ್ತಾರೆ ಎಂದರೆ ಸರಿಯಲ್ಲ. ಎದುರುದಾರರೇ ವಿದ್ಯಾಭ್ಯಾಸದ ಖರ್ಚು-ವೆಚ್ಚಗಳನ್ನು ಭರಿಸಿದ್ದರೂ ಕೂಡ ಇಲ್ಲವೆಂದು ನಾನು ಈಗ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಮೊದಲು ಟಿವಿಎಸ್ ಮೋಟಾರು ಸೈಕಲ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು ಎಂದರೆ ನಿಜ.

ಆದರೆ ಈಗ ಮಾಡುತ್ತಿಲ್ಲ. ನನ್ನ ಮಗ ತಿಂಗಳಿಗೆ ರೂ.15,000/- ಸಂಪಾದನೆ ಮಾಡುತ್ತಿದ್ದನು ಎಂದರೆ ಸರಿಯಲ್ಲ. ನನ್ನ ಮಗ ಟಿವಿಎಸ್ ಮೋಟಾರು ಸೈಕಲ್ ಕಂಪನಿಯಲ್ಲಿ ಕೆಲಸ ಮಾಡಿ ಮಾಸಿಕ ರೂ.15,000/- ಸಂಬಳ ಪಡೆದಿದ್ದರೂ ಸಹ ಇಲ್ಲವೆಂದು ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಎದುರುದಾರರು ನನ್ನನ್ನು ಮದುವೆ ಮಾಡಿಕೊಂಡಾಗಿನಿಂದಲೂ ಇಂದಿನವರೆಗೂ ಕೂಡ ಚನ್ನಾಗಿಯೇ ನೋಡಿಕೊಂಡು ಎಲ್ಲಾ ಖರ್ಚು-ವೆಚ್ಚಗಳನ್ನು ಅವರೇ ಪಾವತಿಸುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗ ಈಗ ಚೌಹಳ್ಳಿಯಲ್ಲಿರುವ ಸಾಯಿ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದಾನೆ ಎಂದರೆ ನಿಜ. ಆದರೆ ಕಳೆದ ಮೂರು ತಿಂಗಳಿನಿಂದ ಆತನು ಕೆಲಸ ಮಾಡುತ್ತಿದ್ದಾನೆ. ನನ್ನ ಮಗನಿಗೆ ಅಲ್ಲಿ ಒಳ್ಳೆಯ ಸಂಬಳ ಕೂಡ ಸಿಗುತ್ತಿದೆ ಎಂದರೆ ಸರಿಯಲ್ಲ.

ನನ್ನ ಮಗಳಾದ ಪವನಶ್ರೀ ಇವಳಿಗೆ ಈಗ 29 ವರ್ಷ ವಯಸ್ಸಾಗಿದೆ. ಅವಳಿಗೆ ಇನ್ನೂ ಮದುವೆಯಾಗಿಲ್ಲ ಎಂದರೆ ನಿಜ. ನನ್ನ ಮಗಳ ಮದುವೆಯ ಖರ್ಚು-ವೆಚ್ಚ ಮತ್ತು ಇನ್ನಿತರೆ ಖರ್ಚು-ವೆಚ್ಚ ಮತ್ತು ಆಗು-ಹೋಗುಗಳನ್ನು ನೋಡುವ ಜವಾಬ್ದಾರಿ ಎದುರುದಾರರಿಗೆ ಇದೆ ಎಂದರೆ ನಿಜ. ನಾನು ಇಂದಿನವರೆಗೂ ಕೂಡ ಮಗಳಿಗೆ ಸಂಬಂಧಿಸಿದ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸಿಲ್ಲ ಎಂದರೆ ನಿಜ. ಕಾರಣವೇನೆಂದರೆ ನನ್ನ ಮಗನನ್ನು ನಿರ್ವಹಿಸುವುದೇ ಕಷ್ಟವಾಗಿದ್ದರಿಂದ ಮಗಳ ಜವಾಬ್ದಾರಿ ನಿರ್ವಹಿಸಲು ನನಗೆ ಸಾಧ್ಯವಾಗಿಲ್ಲ.

ಎದುರುದಾರರು ಬೇರೊಬ್ಬ ಹೆಣ್ಣು ಮಗಳ ಜೊತೆಗೆ ಅನೈತಿಕ ಸಂಬಂಧ ಹೊಂದಿದ್ದಾರೆ ಎಂದು ಸುಳ್ಳು ಆರೋಪ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರು ಮೊದಲಿನಿಂದಲೂ ಮತ್ತು ಈಗಲೂ ಕೂಡ ನನ್ನನ್ನು ಮತ್ತು ನನ್ನ ಮಗನನ್ನು ಚನ್ನಾಗಿ ನೋಡಿಕೊಳ್ಳಲು ಸಿದ್ಧರಿದ್ದರೂ ಕೂಡ ನಾನೇ ಅವರ ಜೊತೆಗೆ ಚನ್ನಾಗಿ ಇರಲು ಬಯಸುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ಅವನ ಜೊತೆ ಅನೈತಿಕ ಸಂಬಂಧ ಹೊಂದಿರುವ ನನ್ನ ತಂಗಿ ಇವಳ ವಿರುದ್ಧ ನಾನು ಪೊಲೀಸರಿಗೆ ದೂರನ್ನು

ನೀಡಿರುತ್ತೇನೆ. ನಾನು ಹೇಳುವಂತೆ ಯಾವುದೇ ದೂರನ್ನು ಕೊಟ್ಟಿಲ್ಲವಾದರೂ ಸಹ, ದೂರನ್ನು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಎದುರುದಾರರಿಗೆ ವಿನಾಃಕಾರಣ ತೊಂದರೆ ಕೊಡುತ್ತಿದ್ದರಿಂದ ಮತ್ತು ಅವರ ವಿರುದ್ಧ ವಿನಾಃಕಾರಣ ಆರೋಪಗಳನ್ನು ಮಾಡುತ್ತಿದ್ದರಿಂದ ನನ್ನ ಮಗಳನ್ನು ಮದುವೆ ಮಾಡಿಕೊಳ್ಳಲು ಯಾವ ವರರೂ ಕೂಡ ಮುಂದೆ ಬರುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮಗನೂ ಕೂಡ ಈಗ ಪ್ರಾಪ್ತನಾಗಿದ್ದು ಆತನೂ ಕೂಡ ಸಾಕಷ್ಟು ವರಮಾನ ಗಳಿಸುತ್ತಿದ್ದರಿಂದ ಮತ್ತು ಎದುರುದಾರರೂ ಕೂಡ ಈಗ ಹುದ್ದೆಯಿಂದ ವಯೋನಿವೃತ್ತಿ ಸನಿಹದಲ್ಲಿರುವುದರಿಂದ ನಾನು ಕೇಳಿದಂತೆ ಜೀವನಾಂಶ ಕೊಡಲು ಅವರು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಎದುರುದಾರರು ನನ್ನ ಮಗನ ಮುಖಾಂತರ ನಮಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ವಹಿಸಿಕೊಟ್ಟಿದ್ದರಿಂದ ಮತ್ತು ಜಮೀನನ್ನು ನಮ್ಮ ಸ್ವಾಧೀನಕ್ಕೆ ಬಿಟ್ಟಿದ್ದರಿಂದ ಈಗ ಹೆಚ್ಚಿನ ಹಣ ಕೇಳಲು ನಮಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ, ಅವರಿಂದ ಹೆಚ್ಚಿನ ಹಣ ಪಡೆಯುವ ಸಂಬಂಧ ಸುಳ್ಳು ಪ್ರಕರಣದಲ್ಲಿ ದಾಖಲಿಸಿ ಈಗ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.